ತಾನೊಬ್ಬ ಚಿತ್ರಕಾರನಾಗುತ್ತೇನೆಂದು ಎಂದೂ ಯೋಚಿಸಿರಲಿಲ್ಲವಂತೆ. ಶಾಲಾದಿನಗಳಲ್ಲಿ ವಿಜ್ಞಾನದ ಆಕೃತಿಗಳನ್ನು ಬರೆಯುವುದಲ್ಲಿ ಆಸಕ್ತಿಯೇನೋ ಇತ್ತು. ಆದರೆ ಈ ಅಭಿರುಚಿ ಮುಂದೊಂದು ದಿನ ತನ್ನ ಉದ್ಯೋಗವನ್ನೇ ರೂಪಿಸೀತೆಂದು ಅವರು ಕನಸಿನಲ್ಲೂ ಎಣಿಸಿರಲಿಲ್ಲ. ಕಾಲೇಜಿನಲ್ಲಿ ಜೀವಶಾಸ್ತ್ರ, ರಸಾಯನಶಾಸ್ತ್ರಗಳನ್ನು ಅಭ್ಯಸಿಸಿದ ರಾವ್‌ಬೈಲ್ ಮುಂಬಯಿ ಸೇರಿ ಜೀವವಿಮಾ ಸಂಸ್ಥೆಯಲ್ಲಿ ಕಾರಕೂನರಾಗಿ ಸೇರಿದರು. ಜೊತೆಗೆ ಸಂಜೆಯ ಸಮಯದಲ್ಲಿ 'ಜೇ. ಜೇ. ಸ್ಕೂಲ್ ಆಫ್ ಅಪ್ಲಾಯ್ಡ ಆರ್ಟ್ಸ್'ನಲ್ಲಿ ಗ್ರಾಫಿಕ್ ಕಲೆಯಲ್ಲಿ ಒಂದು ಕೋರ್ಸನ್ನು ಉತ್ತಮ ವರ್ಗದಲ್ಲಿ ಮುಗಿಸಿ ತಮ್ಮದೇ ಆಫೀಸಿನ ಕಲಾವಿಭಾಗಕ್ಕೆ ಟ್ರಾನ್ಸ್‌ಫರ್ ಪಡೆದದ್ದು ಒಂದು ಸಾಹಸಗಾಥೆ. ಅಂಕೆಸಂಖ್ಯೆಗಳ ವ್ಯವಹಾರ ತೊರೆದು ಬಣ್ಣ ಕುಂಚಗಳನ್ನು ಅಂಗೀಕರಿಸಿದ ಬಳಿಕ ಕಲೆಯೇ ಅವರ ಉಸಿರಾಯಿತು.

## ಕಾಯಕದ ಕೈಲಾಸದಲ್ಲಿ...

ರಾವ್‌ಬೈಲ್ ಹತ್ತರ ಜೊತೆಗೆ ಹನ್ನೊಂದನೇ ಕಲಾವಿದರಾಗಲಿಲ್ಲ. ಸತತ ಪರಿಶ್ರಮದಿಂದ ತಮ್ಮದೇ ಆದ ಶೈಲಿಯೊಂದನ್ನು ರೂಪಿಸಿಕೊಂಡರು. ಅವರದ್ದು ಅತ್ತ **abstract** ಅಲ್ಲದ ಮತ್ತೆ ತೀರ **realisti**ಕ್ಕೂ ಅಲ್ಲದ ಕ್ಯಾರಿಕೇಚರ್ ಮಾದರಿಯ ಕಲೆ. ಅವರೊಬ್ಬ ಒಳ್ಳೆಯ ಮಿಮಿಕ್ರಿ ಪಟುವೂ ಆಗಿದ್ದರಿಂದ ಸೂಕ್ಷ್ಮ ನಿರೀಕ್ಷಣೆ ಅವರ ರಕ್ತದಲ್ಲಿತ್ತು. ಗೆರೆಗಳ ಅಣಕಕ್ಕೆ ತಮ್ಮದೇ ಆದ ಒಂದು ಛಾಪನ್ನು ಕೊಡುವುದು ಅವರಿಗೆ ಇದರಿಂದ ಸಾಧ್ಯವಾಗಿರಬೇಕು.

ರಾವ್‌ಬೈಲರ ಮೊತ್ತಮೊದಲ ರೇಖಾಚಿತ್ರ ಹಾಗೂ ತೈಲಚಿತ್ರಗಳ ಪ್ರದರ್ಶನ 1966ರಲ್ಲಿ ಜರುಗಿತು. ಅವುಗಳಲ್ಲಿನ ಚಲನಶೀಲತೆ, ತಾಜಾತನಗಳು ಕಲಾವಿಮರ್ಶಕರ ಗಮನವನ್ನು ಕೂಡಲೇ ಸೆಳೆದವು. 1967 ರಲ್ಲಿ **Bombay Arts Society**ಯವರು ನಡೆಸಿದ ಪ್ರದರ್ಶನದಲ್ಲಿ ರಾವ್‌ಬೈಲರ ಲ್ಯಾಂಡ್‌ಸ್ಕೇಪ್ಸ್ ಇದ್ದವು. **Guild of Commercial Artists** ನಡೆಸಿದ 1967 ಮತ್ತು1968ರ ಪ್ರದರ್ಶನಗಳಲ್ಲಿ **'For Best Illustration'** ಪುರಸ್ಕಾರ ಎರಡು ಬಾರಿ ದೊರೆಯಿತು. ಮುಂದೆ 1972ರಲ್ಲಿ **'Crowds'** ಮತ್ತು ತೈಲಚಿತ್ರಗಳು ಪ್ರದರ್ಶಿತವಾದವು.






ರಾವ್‌ಬೈಲ್ ಅವರ ಲಕೋಟೆಯ ಮೇಲೆ ಕೊಲಾಜ್ ಕಲೆ